# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 25.03.2019ರ ಸೋಮವಾರದಂದು **ಪೂರ್ವಾಹ್ನ** 11.30 ಗಂಟೆಗೆ ಜರುಗಿದ ಸಿಂಡಿಕೇಟಿನ ಎರಡನೇ ಸಾಮಾನ್ಯ ಸಭೆಯ ನಡವಳಿಗಳು.

**ಹಾಜರಿದ್ದ ಸದಸ್ಯರು:**

1. ಪ್ರೊ. ಜಿ.ಹೇಮಂತಕುಮಾರ್ – ಕುಲಪತಿಗಳು ಹಾಗೂ ಅಧ್ಯಕ್ಷರು
2. ಪ್ರೊ. ಮಹದೇವ – ಸದಸ್ಯರು
3. ಡಾ. ರಾಜಗೋಪಾಲ್ – ಸದಸ್ಯರು
4. ಡಾ. ಎಂ.ಪ್ರೀತಿ – ಸದಸ್ಯರು
5. ಶ್ರೀ ಜಿ.ಅಶ್ವತನಾರಾಯಣ – ಸದಸ್ಯರು
6. ಪ್ರೊ. ಕೆ.ಟಿ.ಅಪ್ಪಾಜಪ್ಪ – ಸದಸ್ಯರು
7. ಪ್ರೊ. ಎ.ಬಾಲಸುಬ್ರಮಣಿಯನ್ – ಸದಸ್ಯರು
8. ಪ್ರೊ. ಕೆ.ಎಂ.ಮಹದೇವನ್ ಕುಲಸಚಿವರು (ಪರೀಕ್ಷಾಂಗ) – ಸದಸ್ಯರು
9. ಪ್ರೊ.ಲಿಂಗರಾಜ ಗಾಂಧಿ – ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

**ಹಾಜರಾಗದ ಸದಸ್ಯರು:**

1. ಕು. ಸಹನಾ ಶಿವಪ್ಪ, ಸಿಂಡಿಕೇಟ್ ಸದಸ್ಯರು.
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
6. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಮಾನ್ಯ ಕುಲಪತಿಗಳು ಸಿಂಡಿಕೇಟಿನ ಎರಡನೇ ಸಾಮಾನ್ಯ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು.

ನಂತರ ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಸಭೆಯಲ್ಲಿ ಮಂಡಿಸಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| **I** | **ದಿನಾಂಕ: 31.01.2019ರಂದು ನಡೆದ ಸಿಂಡಿಕೇಟಿನ ಮೊದಲನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ.** |
| **ತೀರ್ಮಾನ** | ದಿನಾಂಕ: 31.01.2019ರಂದು ನಡೆದ ಸಿಂಡಿಕೇಟಿನ ಮೊದಲನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸಲಾಯಿತು. |

| | |
|---|---|
| II | ದಿನಾಂಕ: 31.01.2019ರಂದು ನಡೆದ ಸಿಂಡಿಕೇಟಿನ ಮೊದಲನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿ. |
| ತೀರ್ಮಾನ | ಗಮನಿಸಲಾಯಿತು. |
| 2019/3.1 | ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗೆಗೆ. |
| | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಲವಾರು ಅಧ್ಯಯನ ಪೀಠಗಳಿದ್ದು ಕೆಲವು ಪೀಠಗಳಿಗೆ ಸೂಕ್ತ ತಜ್ಞರು ಸಿಗುತ್ತಿಲ್ಲ ಮತ್ತು ಅವರುಗಳಿಗೆ ನೀಡುವ ಗೌರವಧನದಲ್ಲೂ ಬಹಳ ತಾರತಮ್ಯವಿದೆ, ಜೊತೆಗೆ ಈ ಪೀಠಗಳಲ್ಲಿ ಹಲವಾರು ಸಮಸ್ಯೆಗಳಿರುವುದನ್ನು ಸಹ ಗಮನಿಸಲಾಗಿದೆ. ಆದ್ದರಿಂದ ಎಲ್ಲಾ ಪೀಠಗಳ ಪರಿಣಿತರ ಪಟ್ಟಿಯನ್ನು ಪಡೆದು ಅಂತಹವರ ವ್ಯಕ್ತಿಗತ ವಿವರಗಳನ್ನು ಪರಿಶೀಲಿಸಿ ಆಯ್ಕೆಯಾಗಲ್ಪಡುವ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸಿ ಅಧಿಕಾರಿಗಳೊಡನೆ ಮತ್ತು ಆಯಾ ವಿಭಾಗದ ಮುಖ್ಯಸ್ಥರೊಡನೆ ಚರ್ಚಿಸಿ ಅವರು ಆ ಪೀಠದ ಉದ್ದೇಶಕ್ಕಾಗಿ ಹಮ್ಮಿಕೊಳ್ಳಲಾಗುವ ಕಾರ್ಯಕ್ರಮಗಳ ರೂಪರೇಷೆಗಳ ಬಗ್ಗೆ ಅವಲೋಕಿಸಿದ ಆನಂತರ ಪ್ರಾಧ್ಯಾಪಕರನ್ನು ನೇಮಿಸುವುದು ಸೂಕ್ತವಾಗುತ್ತದೆಂದು ತಾವು ಭಾವಿಸುವುದಾಗಿ ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. |
| ತೀರ್ಮಾನ | ಪರಿಣಿತರ ವ್ಯಕ್ತಿಗತ ವಿವರಗಳನ್ನು ಪರಿಶೀಲಿಸಿ ಅರ್ಹತೆ ಹಾಗೂ ಅನುಭವದ ಮೇಲೆ ಆಯ್ಕೆಯಾಗಲ್ಪಡುವ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸಿ ಅಧಿಕಾರಿಗಳೊಡನೆ ಮತ್ತು ಆಯಾ ವಿಭಾಗದ ಮುಖ್ಯಸ್ಥರೊಡನೆ ಅಧಿಕಾರಿಗಳೊಡನೆ ಚರ್ಚಿಸಿ ಅವರು ಆ ಪೀಠದ ಉದ್ದೇಶಕ್ಕಾಗಿ ಹಮ್ಮಿಕೊಳ್ಳಲಾಗುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಪಡೆದು ಆನಂತರ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2019/3.2 | ಟಿಪ್ಪು ಸುಲ್ತಾನ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗೆಗೆ. |
| ತೀರ್ಮಾನ | ಟಿಪ್ಪು ಸುಲ್ತಾನ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2019/3.3 | ಡಾ. ಬಿ.ಆರ್.ಅಂಬೇಡ್ಕರ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗೆಗೆ |
| ತೀರ್ಮಾನ | ಡಾ. ಬಿ.ಆರ್.ಅಂಬೇಡ್ಕರ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| 2019/3.4 | ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಗಳ ನಿರ್ಣಯದ ಮೇರೆಗೆ ಸ್ಪೇಷಲೈಸ್ಡ್ ಪ್ರೋಗ್ರಾಂ ಮತ್ತು ಸಂಶೋಧನಾ ಕೇಂದ್ರಗಳ ಮಾನ್ಯತೆಯ ಬಗ್ಗೆ ಪುನರ್ ರಚಿತವಾಗಿದ್ದ ಸಮಿತಿಯ ನಡವಳಿ ಅನುಮೋದನೆಗೆ. |
| ತೀರ್ಮಾನ | "ಮೈಸೂರು ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದು ನಡೆಸಲಾಗುತ್ತಿರುವ ಸ್ಪೇಷಲೈಸ್ಡ್ ಪ್ರೋಗ್ರಾಂ ಮತ್ತು ಸಂಶೋಧನಾ ಕೇಂದ್ರದ ಮಾನ್ಯತೆಯ ಬಗ್ಗೆ ತಾಂತ್ರಿಕ ವಿಷಯಗಳಲ್ಲಿನ ಸ್ಪಷ್ಟತೆಗಾಗಿ" ಹಿಂದಿನ ಕುಲಸಚಿವ(ಪರೀಕ್ಷಾಂಗ) ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪ್ರೊ. ಜೆ.ಸೋಮಶೇಖರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಿತಿಯ ಶಿಫಾರಸ್ಸಿನನ್ವಯ ಒಡಂಬಡಿಕೆಯನ್ನು ಮಾಡಿಕೊಳ್ಳಲು ತಯಾರಿಸಲಾಗಿದ್ದ ಕರಡನ್ನು ಮಂಡಿಸಲಾಗಿ ದಿನಾಂಕ: 28.12.2018ರ ಸಿಂಡಿಕೇಟ್ ಹಾಗೂ ದಿನಾಂಕ: 14.01.2019ರ ವಿದ್ಯಾವಿಷಯಕ ಪರಿಷತ್ ಸಭೆಗಳಲ್ಲಿ ಚರ್ಚಿಸಿ ಮತ್ತಷ್ಟು ಅಂಶಗಳನ್ನು ಸೇರ್ಪಡೆ ಮಾಡಲು ಸೂಚಿಸಿದಂತೆ ತಯಾರಿಸಲಾಗಿರುವ ಸಮಿತಿಯ ಪರಿಷ್ಕೃತ ನಡವಳಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| 2019/3.5 | ಸ್ನಾತಕೋತ್ತರ ಕೇಂದ್ರ, ಮಂಡ್ಯ, ಇಲ್ಲಿಗೆ ನಿರ್ದೇಶಕರನ್ನು ನೇಮಕಾತಿ ಮಾಡುವ ಬಗೆಗೆ. |
| | ಡಾ. ಎಚ್.ಆರ್. ಉಮಾ, ಪ್ರಾಧ್ಯಾಪಕರು, ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಸರ್.ಎಂ.ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ಮಂಡ್ಯ ಇವರನ್ನು ಎರಡು ವರ್ಷದ |

| | |
|---|---|
| | ಅವಧಿಗೆ ನಿರ್ದೇಶಕರಾಗಿ ನೇಮಕ ಮಾಡಲಾಗಿತ್ತು. ಇವರ ನಿರ್ದೇಶಕರ ಅವಧಿಯು ದಿನಾಂಕ: 09.02.2019ಕ್ಕೆ ಮುಕ್ತಾಯಗೊಂಡಿರುವುದರಿಂದ ನಿರ್ದೇಶಕರ ಸ್ಥಾನಕ್ಕೆ ಡಾ. ವಿಜಯ್ ಶೇಷಾದ್ರಿಯವರನ್ನು ನೇಮಿಸಬೇಕಾಗಿರುತ್ತದೆ. ಆದರೆ ಈ ಹಿಂದೆ ಇವರು ನಿರ್ದೇಶಕರಾಗಿದ್ದ ಅವಧಿಯಲ್ಲಿ ಹಲವಾರು ದೂರುಗಳಿದ್ದುದ್ದರಿಂದ ಅವರ ಬದಲಿಗೆ ಪ್ರೊ. ಚಂದ್ರಾಜು ಅವರನ್ನೆ ಮುಂದುವರೆಸಲಾಗಿತ್ತು ಎಂಬುದಾಗಿ ಸಭೆಗೆ ಮಾಹಿತಿ ನೀಡಿದರು. |
| ತೀರ್ಮಾನ | ಸುದೀರ್ಘ ಚರ್ಚೆಯ ನಂತರ ಮಾನ್ಯ ಕುಲಪತಿಗಳು ಎಲ್ಲಾ ಉದ್ಯೋಗಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೇಂದ್ರವನ್ನು ಪ್ರಗತಿಯ ಕಡೆ ಮುನ್ನಡೆಸುವ ಸಂಬಂಧ ಡಾ. ವಿಜಯ್ ಶೇಷಾದ್ರಿಯವರೊಡನೆ ಚರ್ಚಿಸಿ ಅನಂತರ ಕೇಂದ್ರಕ್ಕೆ ಸೂಕ್ತರಾದವರನ್ನು ನಿರ್ದೇಶಕರನ್ನಾಗಿ ನೇಮಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2019/3.6** | **ಭೂಗೋಳಶಾಸ್ತ್ರ ಅಧ್ಯಯನ ವಿಭಾಗಕ್ಕೆ ನೂತನ ಅಧ್ಯಕ್ಷರನ್ನು ನೇಮಕ ಮಾಡುವ ಕರಡು ಅನುಸಮರ್ಥನೆಗಾಗಿ.** |
| ತೀರ್ಮಾನ | ಭೂಗೋಳಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದ ಪ್ರೊ. ಅಸಿಮಾ ನುಸ್ರತ್, ಪ್ರಾಧ್ಯಾಪಕರು ಇವರ ಅಧ್ಯಕ್ಷರ ಅವಧಿಯು ದಿನಾಂಕ 06.03.2019ಕ್ಕೆ ಮುಕ್ತಾಯವಾಗಿರುವುದರಿಂದ ವಿಭಾಗದ ಅಧ್ಯಕ್ಷರ ಸ್ಥಾನಕ್ಕೆ ಜೇಷ್ಠತೆಯ ಆಧಾರದ ಮೇಲೆ ಡಾ. ಬಿ.ಚಂದ್ರಶೇಖರ, ಪ್ರಾಧ್ಯಾಪಕರು ಇವರನ್ನು ಎರಡು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ದಿನಾಂಕ: 07.03.2019ರಿಂದ ಅನ್ವಯವಾಗುವಂತೆ ನೇಮಕ ಮಾಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2019/3.7** | **ಮಾನವಶಾಸ್ತ್ರ ಅಧ್ಯಯನ ವಿಭಾಗಕ್ಕೆ ನೂತನ ಅಧ್ಯಕ್ಷರನ್ನು ನೇಮಕ ಮಾಡುವ ಕರಡು ಸಿಂಡಿಕೇಟಿನ ಅನುಮೋದನೆಗಾಗಿ.** |
| ತೀರ್ಮಾನ | ಮಾನವಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಪ್ರೊ. ಎಂ.ಆರ್.ಗಂಗಾಧರ್ ಇವರನ್ನು ದಿನಾಂಕ 31.03.2017ರಿಂದ 30.03.2019ರವರೆಗೆ ಅಧ್ಯಕ್ಷರಾಗಿ ನೇಮಕ ಮಾಡಲಾಗಿತ್ತು. ಆದರೆ ಈ ವಿಭಾಗದಲ್ಲಿ ಇವರೊಬ್ಬರೇ ಪ್ರಾಧ್ಯಾಪಕರಿರುವುದರಿಂದ ಇವರನ್ನು ಮುಂದಿನ ಎರಡು ವರ್ಷಗಳ ಅವಧಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ ವಿಭಾಗದ ಅಧ್ಯಕ್ಷರಾಗಿ ಮುಂದುವರೆಸಲು ಸಿಂಡಿಕೇಟ್ ಅನುಮೋದಿಸಿತು. |
| **2019/3.8** | **ಡಾ. ಎಂ.ಮೀರಾ, ಸಹಾಯಕ ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು, ಇವರು ಅಮೇರಿಕಾ ದೇಶಕ್ಕೆ ಭೇಟಿ ನೀಡಲು ಅನುಮತಿಯನ್ನು ನೀಡಬೇಕೆಂದು ಕೋರಿರುವ ಬಗ್ಗೆ.** |
| ತೀರ್ಮಾನ | ಡಾ. ಎಂ.ಮೀರಾ, ಸಹಾಯಕ ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರು 2018-19ನೇ ಸಾಲಿನ ಬೇಸಿಗೆ ರಜೆಯನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ವಿಧದ ಆರ್ಥಿಕ ಹೊಣೆಗಾರಿಕೆಯಿಲ್ಲದಂತೆ ದಿನಾಂಕ: 23.05.2019 ರಿಂದ 09.07.2019ರವರೆಗೆ ಅಮೇರಿಕದಲ್ಲಿರುವ ತಮ್ಮ ಕುಟುಂಬದ ಸದಸ್ಯರನ್ನು ಭೇಟಿ ಮಾಡಲು ಹಾಗೂ ಪ್ರವಾಸ ಕೈಗೊಳ್ಳಲು ಸಿಂಡಿಕೇಟ್ ಅನುಮೋದಿಸಿತು. |
| **2019/3.9** | ಪ್ರೊ. ಮಹೇಶ್ ಚಂದ್ರ ಗುರು, ಅಧ್ಯಕ್ಷರು, ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ದಿನಾಂಕ: 07.09.2018 ರಂದು ಶುಕ್ರವಾರ ಆಂದೋಲನ ದಿನಪತ್ರಿಕೆಯಲ್ಲಿ "ಮುಂದುವರಿದ ಮೈಸೂರು ವಿವಿ ಸ್ವಚ್ಛತಾ ನೌಕರರ ಹೋರಾಟ" ಎಂಬ ಶೀರ್ಷಿಕೆ ಅಡಿಯಲ್ಲಿರುವ ವರದಿಯಲ್ಲಿ ನೀಡಿರುವ ಹೇಳಿಕೆಯ ಬಗ್ಗೆ. |

| | |
|---|---|
| ತೀರ್ಮಾನ | ಪ್ರೊ. ಮಹೇಶ್ ಚಂದ್ರ ಗುರು ಇವರು ದಿನಾಂಕ: 31.01.2019ರಂದು ವಯೋ ನಿವೃತ್ತರಾಗಿರುವುದನ್ನು ಹಾಗೂ ಕಾರಣ ಕೇಳುವ ನೋಟಿಸಿಗೆ ನೀಡಿರುವ ಉತ್ತರವನ್ನು ಗಮನಿಸಿದ ಸಿಂಡಿಕೇಟ್ ವಿಚಾರಣೆಗೆ ಒಳಪಡಿಸುವುದರ ಬದಲಿಗೆ ಇನ್ನು ಮುಂದೆ ವಿಶ್ವವಿದ್ಯಾನಿಲಯದ ಘನತೆಗೆ ಕುಂದುತರುವಂತಹ ಮತ್ತು ಅಧಿಕಾರಿಗಳ ವಿರುದ್ಧ ಏಕವಚನ ಪದಪ್ರಯೋಗ ಮಾಡದಂತೆ ಒಂದು ಸೂಕ್ತ ಎಚ್ಚರಿಕೆಪತ್ರ ನೀಡಿ ಈ ಪ್ರಕರಣವನ್ನು ಮುಕ್ತಾಯಗೊಳಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2019/3.10** | **ಡಾ. ಪಿ.ಆರ್.ತಿಪ್ಪೇಸ್ವಾಮಿ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗೆಗೆ.** |
| ತೀರ್ಮಾನ | ಡಾ. ಪಿ.ಆರ್.ತಿಪ್ಪೇಸ್ವಾಮಿ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2019/3.11** | **ಪ್ರತಿಭಾ.ಪಿ., ಸಂಶೋಧನಾ ಅಭ್ಯರ್ಥಿ, ಇವರು ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ.** |
| ತೀರ್ಮಾನ | ಡಾ. ಗುರುರಾಜ್, ಪ್ರಾಧ್ಯಾಪಕರು, ಇವರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರತಿಭಾ.ಪಿ., ಸಂಶೋಧನಾ ಅಭ್ಯರ್ಥಿ, ಇವರು ಹೆಚ್ಚುವರಿಯಾಗಿ ಆರು ತಿಂಗಳುಗಳ ಕಾಲಾವಕಾಶ ಕೋರಿರುವ ಮನವಿಯನ್ನು ಸಿಂಡಿಕೇಟ್ ಸಭೆಯಲ್ಲಿ ಪರಿಶೀಲಿಸಿ ಸದರಿಯವರಿಗೆ ರೂ.25,000/-ಗಳ ದಂಡಶುಲ್ಕದೊಂದಿಗೆ ಸಂಶೋಧನೆಯನ್ನು ಅಂತಿಮಗೊಳಿಸಿ ಮಹಾಪ್ರಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕೆಂಬ ಷರತ್ತಿನೊಂದಿಗೆ ಸಿಂಡಿಕೇಟ್ ಅನುಮೋದಿಸಿತು.<br>ಮುಂದುವರೆದು, ಇನ್ನು ಮುಂದೆ ಏಳು ವರ್ಷಗಳ ನಂತರ ಹೆಚ್ಚುವರಿ ವಿಸ್ತರಣೆ ಕೋರುವ ಯಾವುದೇ ಸಂಶೋಧನಾ ವಿದ್ಯಾರ್ಥಿಗೆ ಪಿಎಚ್.ಡಿ. ನಿಯಾಮವಳಿಗಳಿಗೆ ವಿರುದ್ಧವಾಗಿ ಕಾಲಾವಕಾಶವನ್ನು ನೀಡಬಾರದು ಎನ್ನುವ ಉದ್ದೇಶದಿಂದ ಮೊದಲಿಗೆ ಎಲ್ಲಾ ಮಾರ್ಗದರ್ಶಕರಿಗೆ ಸಂಶೋಧನಾ ಕೇಂದ್ರಗಳಿಗೆ / ಈಗಾಗಲೇ 5 ವರ್ಷಗಳನ್ನು ಪೂರೈಸಿರುವ ಸಂಶೋಧನಾ ವಿದ್ಯಾರ್ಥಿಗಳಿಗೆ ಯಾವುದೇ ಕಾರಣದಿಂದಲೂ ಅವಧಿ ವಿಸ್ತರಣೆಗೆ ಮನವಿ ಸಲ್ಲಿಸಬಾರದೆಂಬ ವಿಷಯವನ್ನು ಒಂದು ಸುತ್ತೋಲೆಯ ಮೂಲಕ ಕಳುಹಿಸಿ ನಂತರ ಸಿಂಡಿಕೇಟ್‌ನಲ್ಲಿ ಒಂದು ನಿರ್ದಿಷ್ಟ ದಿನದಿಂದ ಶಾಶ್ವತವಾಗಿ ಈ ರೀತಿಯ ಅನುಮತಿಯನ್ನು ಸ್ಥಗಿತಗೊಳಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2019/3.12** | **ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ.** |
| ತೀರ್ಮಾನ | ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪೀಠಕ್ಕೆ ಸೂಕ್ತ ಪರಿಣಿತರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಿಸುವ ಸಲುವಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರವನ್ನು ನೀಡಲು ಸಿಂಡಿಕೇಟ್ ತೀರ್ಮಾನಿಸಿತು.<br>ಹಾಗು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಬದಲಿಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎಂದು ಪೀಠದ ಹೆಸರನ್ನು ಬದಲಾಯಿಸಲು ಅಗತ್ಯ ಕ್ರಮ ಕೈಗೊಳ್ಳಲು ಸಹ ಸಿಂಡಿಕೇಟ್ ತೀರ್ಮಾನಿಸಿತು. |
| **2019/3.13** | **ರಾಗಿಣಿ. ವಿ., ಸಂಶೋಧನಾ ಅಭ್ಯರ್ಥಿ, ಇವರು ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ** |
| ತೀರ್ಮಾನ | ಡಾ. ಎಂ.ನಂಜಯ್ಯ ಹೊಂಗನೂರ್, ಪ್ರಾಧ್ಯಾಪಕರು ಇವರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಗಿಣಿ.ವಿ., ಸಂಶೋಧನಾ ಅಭ್ಯರ್ಥಿ ಇವರು ಹೆಚ್ಚುವರಿಯಾಗಿ ಕಾಲಾವಕಾಶ ಕೋರಿರುವ ಮನವಿಯನ್ನು ಪರಿಶೀಲಿಸಿ ಸದರಿಯವರಿಗೆ ರೂ.25,000/-ಗಳ ದಂಡಶುಲ್ಕದೊಂದಿಗೆ ಸಂಶೋಧನೆಯನ್ನು ಅಂತಿಮಗೊಳಿಸಿ ಮಹಾಪ್ರಬಂಧವನ್ನು |

| | |
|---|---|
| | ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕೆಂಬ ಷರತ್ತಿನೊಂದಿಗೆ ಆರು ತಿಂಗಳ ಕಾಲಾವಕಾಶವನ್ನು ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2019/3.14** | ಡಾ. ಲಲಿತಾ ರಂಗರಾಜನ್, ಸಹ ಪ್ರಾಧ್ಯಾಪಕರು, ಗಣಕವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇವರು ಯು.ಎಸ್.ಎ (ಅಮೇರಿಕಾ) ದೇಶದಲ್ಲಿ ಅವರ ಮಗನ ವಿವಾಹ ಮಹೋತ್ಸವದಲ್ಲಿ ಭಾಗವಹಿಸುವ ಸಂಬಂಧ, ಸದರಿ ದೇಶಕ್ಕೆ ಖಾಸಗಿಯಾಗಿ ಭೇಟಿಯಾಗಲು ಅನುಮತಿಯನ್ನು ನೀಡುವಂತೆ ಕೋರಿರುವ ಬಗ್ಗೆ. |
| ತೀರ್ಮಾನ | ಡಾ. ಲಲಿತಾ ರಂಗರಾಜನ್, ಸಹ ಪ್ರಾಧ್ಯಾಪಕರು, ಗಣಕವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು, ಇವರು ಯು.ಎಸ್.ಎ. (ಅಮೇರಿಕಾ) ದೇಶದಲ್ಲಿ ಅವರ ಮಗನ ವಿವಾಹ ಮಹೋತ್ಸವದಲ್ಲಿ ಭಾಗವಹಿಸುವ ಸಂಬಂಧ ದಿನಾಂಕ: 22.04.2019ರಿಂದ 09.07.2019ರವರೆಗೆ ಇವರ ಖಾತೆಯಲ್ಲಿರುವ ಗಳಿಕೆ ರಜೆಯನ್ನು ಹಾಗೂ ದಿನಾಂಕ 2–5–2019ರಿಂದ ದಿನಾಂಕ 9–7–2019ರವರೆಗೆ ಬೇಸಿಗೆ ರಜೆಯನ್ನು ಉಪಯೋಗಿಸಿಕೊಂಡು ಅಮೇರಿಕಾ ದೇಶಕ್ಕೆ ಖಾಸಗಿಯಾಗಿ ಭೇಟಿ ನೀಡಲು ಕೋರಿರುವುದನ್ನು ಪರಿಗಣಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2019/3.15** | 2018–19ನೇ ಸಾಲಿನ ವಿಶ್ವವಿದ್ಯಾನಿಲಯದ ಕ್ರೀಡಾ ಸಮಿತಿ ಎರಡನೇ ಸಭೆಯ ನಡವಳಿಯನ್ನು ಅನುಮೋದಿಸುವ ಬಗ್ಗೆ. |
| ತೀರ್ಮಾನ | 2018–19ನೇ ಸಾಲಿನ ವಿಶ್ವವಿದ್ಯಾನಿಲಯದ ಎರಡನೇ ಕ್ರೀಡಾ ಸಮಿತಿ ಸಭೆಯ ನಡವಳಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| **2019/3.16** | ಪ್ರೊ. ಸಿ.ಕೆ.ಪುಟ್ಟಸ್ವಾಮಿ, ಪ್ರಾಧ್ಯಾಪಕರು, ಸಮೂಹ ಮಾಧ್ಯಮ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗದ ಅಧ್ಯಕ್ಷರನ್ನು ಪೂರ್ಣಕಾಲಿಕವಾಗಿ ನೇಮಿಸುವಂತೆ ಕೋರಿರುವ ಮನವಿ ಪತ್ರದ ಬಗ್ಗೆ. |
| ತೀರ್ಮಾನ | ಸಮೂಹ ಮಾಧ್ಯಮ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗದ ಅಧ್ಯಕ್ಷರಾಗಿ ಪ್ರೊ. ಬಿ.ಪಿ.ಮಹೇಶ್ ಚಂದ್ರ ಗುರು ಅವರನ್ನು ನೇಮಿಸಲಾಗಿತ್ತು. ಸದರಿಯವರು ವಯೋ ನಿವೃತ್ತರಾಗಿರುವುದರಿಂದ ಅವರ ಬದಲಿಗೆ ತಾತ್ಕಾಲಿಕವಾಗಿ ಡಾ. ಸಿ.ಕೆ.ಪುಟ್ಟಸ್ವಾಮಿ, ಸಹ ಪ್ರಾಧ್ಯಾಪಕರು ಇವರನ್ನು ವಿಭಾಗದ ಅಧ್ಯಕ್ಷರನ್ನಾಗಿ ನೇಮಿಸಿರುವುದನ್ನು ಗಮನಿಸಿದ ಸಿಂಡಿಕೇಟ್ ಜೇಷ್ಠತೆಯ ಆಧಾರದ ಮೇಲೆ ಡಾ. ಸಿ.ಕೆ.ಪುಟ್ಟಸ್ವಾಮಿ, ಸಹ ಪ್ರಾಧ್ಯಾಪಕರು ಇವರನ್ನು ದಿನಾಂಕ 31–01–2019ರಿಂದ ಪೂರ್ವಾನ್ವಯವಾಗುವಂತೆ ಎರಡು ವರ್ಷಗಳ ಪೂರ್ಣಕಾಲಿಕ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ಸಿಂಡಿಕೇಟ್ ಅನುಮೋದಿಸಿತು. |
| **2019/3.17** | ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿರುವ ಭದ್ರತಾ ಸಂಸ್ಥೆಯ ಟೆಂಡರ್ ಅವಧಿ ಮುಗಿದ ನಂತರ ಸೇವೆಯನ್ನು ಮುಂದುವರಿಸಲು ಅನುಮತಿ ನೀಡಿರುವ ಕ್ರಮದ ಬಗ್ಗೆ ಸಿಂಡಿಕೇಟ್ ಸಭೆಯ ಅನುಸಮರ್ಥನೆಗಾಗಿ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿರುವ ಭದ್ರತಾ ಸಂಸ್ಥೆಯಾದ M/s Sharp watch investigation & Security Services Mysore ಇವರ ಟೆಂಡರ್ ಪ್ರಕ್ರಿಯೆಯ ಅವಧಿಯು ದಿನಾಂಕ: 01.09.2017 ರಿಂದ 31.09.2018ರಂದು ಮುಗಿದಿದ್ದು ಆಡಳಿತಾತ್ಮಕ ಕಾರಣಗಳಿಂದ ಮರುಟೆಂಡರ್‌ಗೆ ಆದೇಶಿಸಲಾಗಿರುವುದನ್ನು ಗಮನಿಸಿದ ಸಿಂಡಿಕೇಟ್ ಅರ್ಹ ಸಂಸ್ಥೆಯನ್ನು ನೇಮಿಸುವವರೆಗೆ ತಾತ್ಕಾಲಿಕವಾಗಿ ಹಾಲಿ ಚಾಲ್ತಿಯಲ್ಲಿರುವ ಷರತ್ತು ಹಾಗೂ ನಿಬಂಧನೆಗಳನುಸಾರ ಹೊರಗುತ್ತಿಗೆ ಆಧಾರದ ಮೇಲೆ ಮುಂದುವರೆಸಲು ತೆಗೆದುಕೊಂಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |

| | |
|---|---|
| | ಮುಂದುವರೆದು, ಮಾನವ ಅಭಿವೃದ್ಧಿ ಸಂಪನ್ಮೂಲ ಸಚಿವಾಲಯ (ಎಂ.ಎಚ್.ಆರ್.ಡಿ.) ಮತ್ತು ಉನ್ನತ ಶಿಕ್ಷಣ ಇಲಾಖೆಯ ನಿರ್ದೇಶನದಂತೆ ಮತ್ತಷ್ಟು ಭದ್ರತೆಯನ್ನು ಹೆಚ್ಚಿಸಬೇಕಾಗಿರುವುದರಿಂದ ಟೆಂಡರ್ ಆಹ್ವಾನಿಸುವಾಗ ಹೆಚ್ಚುವರಿಯಾಗಿ ಮತ್ತಷ್ಟು ಕಾವಲುಗಾರರನ್ನು ನೇಮಿಸಿಕೊಳ್ಳಲು ಹಾಗೂ ಹತ್ತಿರದ ಆರಕ್ಷಕ ಠಾಣೆಯ ಸಹಕಾರದೊಂದಿಗೆ ಭದ್ರತಾ ಸಿಬ್ಬಂದಿಗೆ ತರಬೇತಿ ನೀಡಬೇಕಾಗಿರುವುದರಿಂದ ಭದ್ರತಾ ಸಿಬ್ಬಂದಿಗಳನ್ನು ಪೂರೈಸುವ ಟೆಂಡರ್‌ದಾರರು, ಭದ್ರತಾಧಿಕಾರಿ, ವಿಶ್ವವಿದ್ಯಾನಿಲಯದ ಅಧಿಕಾರಿಗಳನ್ನೊಳಗೊಂಡಂತೆ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮುಂದೆ ಯಾವುದೇ ಲೋಪಗಳು ಜರುಗದಂತೆ ಸೂಕ್ತ ಭದ್ರತಾ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲು ಸಹ ಸಿಂಡಿಕೇಟ್ ತೀರ್ಮಾನಿಸಿತು. |
| **2019/3.18** | ಪ್ಲಾನಿಂಗ್ ಕಮಿಷನ್ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗೆಗೆ. |
| ತೀರ್ಮಾನ | ಪ್ಲಾನಿಂಗ್ ಕಮಿಷನ್ ಪೀಠಕ್ಕೆ ಸೂಕ್ತ ಪರಿಣಿತರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ನೇಮಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2019/3.19** | ಕಿರು ಸಂಶೋಧನಾ ಯೋಜನೆಯ ಮಾರ್ಗಸೂಚಿಯನ್ನು ಪರಿಷ್ಕರಿಸುವ ಬಗ್ಗೆ. |
| ತೀರ್ಮಾನ | ಪ್ರೊ. ಟಿ.ಕೆ. ಉಮೇಶ್, ಪ್ರಾಧ್ಯಾಪಕರು, ಭೌತಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಯು ಮೈಸೂರು ವಿಶ್ವವಿದ್ಯಾನಿಲಯ ಒದಗಿಸುವ ಅನುದಾನದಲ್ಲಿ ಕಿರು ಸಂಶೋಧನಾ ಯೋಜನೆಯ ಸಂಬಂಧ ರಚಿಸಿರುವ ಮಾರ್ಗಸೂಚಿಯನ್ನು ಸಿಂಡಿಕೇಟ್ ಅನುಮೋದಿಸಿತು.<br>ಮುಂದುವರೆದು, ಹಲವಾರು ಅನುದಾನಿತ ಸಂಸ್ಥೆಗಳ ಹೆಸರಿನಲ್ಲಿ Minor Research Projectಗಳು ಇರುವುದರಿಂದ ಇದಕ್ಕೆ MUMRP – Mysore University Minor Research Project ಎಂದು ಹೆಸರಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2019/3.20** | ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಸೂಕ್ತ ಜಾಗಗಳಲ್ಲಿ Out Door LED Displayಗಳನ್ನು ಅಳವಡಿಸುವ ಬಗ್ಗೆ. |
| ತೀರ್ಮಾನ | E-Procurement Portal ಮುಖೇನ ಟೆಂಡರ್ ಆಹ್ವಾನಿಸಿ ಮೈಸೂರು ವಿಶ್ವವಿದ್ಯಾನಿಲಯದ ಸೂಕ್ತ ಜಾಗಗಳಲ್ಲಿ Out Door LED Displayಗಳನ್ನು ಅಳವಡಿಸಲು ಈಗಾಗಲೇ ಆದೇಶಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2019/3.21** | ಡಾ. ಶ್ರೇಯಸ್. ಎನ್.ಆರ್., ಸಹಾಯಕ ಪ್ರಾಧ್ಯಾಪಕರು, ಇವರು ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ, ಇಲ್ಲಿಂದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹುದ್ದೆ ರಹಿತವಾಗಿ ಅಂತರ ವಿಶ್ವವಿದ್ಯಾನಿಲಯ ವರ್ಗಾವಣೆಗೆ ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ. |
| ತೀರ್ಮಾನ | ಡಾ. ಶ್ರೇಯಸ್. ಎನ್.ಆರ್., ಸಹಾಯಕ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ ಇವರಿಗೆ ಹುದ್ದೆಸಮೇತ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬರಲು ಅಭ್ಯಂತರವಿಲ್ಲವೆಂದು ಈಗಾಗಲೇ ತಿಳಿಸಿರುವುದನ್ನು ಗಮನಿಸಿದ ಸಿಂಡಿಕೇಟ್ ಸರ್ಕಾರದ ಅನುಮತಿಯೊಂದಿಗೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಹುದ್ದೆ ಸಮೇತ ವರ್ಗಾವಣೆ ಮಾಡಿಕೊಂಡು ಬರುವುದಾದಲ್ಲಿ ವಿಶ್ವವಿದ್ಯಾನಿಲಯದ ಅಭ್ಯಂತರವಿಲ್ಲವೆಂದು ಮತ್ತೊಮ್ಮೆ ತಿಳಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2019/3.22** | ಅಧ್ಯಯನ ಮಂಡಳಿಗಳನ್ನು ಪುನರ್ ರಚಿಸುವ ಬಗ್ಗೆ. |
| ತೀರ್ಮಾನ | ಅಧ್ಯಯನ ಮಂಡಳಿಗಳನ್ನು ಮೂರು ವರ್ಷಗಳ ಅವಧಿಗೆ ಪುನರ್ ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| **2019/3.23** | ಬಿ.ಇಡಿ. ಕಾಲೇಜು ಪ್ರಾಂಶುಪಾಲರುಗಳನ್ನು ಶೈಕ್ಷಣಿಕ ಮತ್ತು ಆಡಳಿತಾತ್ಮಕ ಕಾರ್ಯನಿರ್ವಹಣೆಗೆ ರಚಿಸಲಾಗುವ ಸಮಿತಿಗಳಿಗೆ ನೇಮಕ ಮಾಡುವ ಬಗ್ಗೆ. |
| ತೀರ್ಮಾನ | ಶೈಕ್ಷಣಿಕ ಮತ್ತು ಆಡಳಿತಾತ್ಮಕ ಅನುಭವಗಳನ್ನು ಹೊಂದಿರುವ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಬಿ.ಇಡಿ ಕಾಲೇಜುಗಳ ಪ್ರಾಂಶುಪಾಲರುಗಳನ್ನು ವಿಶ್ವವಿದ್ಯಾನಿಲಯ ರಚಿಸುವ ಅಧ್ಯಯನ ಮಂಡಳಿ, ಪರೀಕ್ಷಾ ಮಂಡಳಿ ಇತ್ಯಾದಿ ಸಮಿತಿಗಳಿಗೆ ನೇಮಕ ಮಾಡುವ ಸಂಬಂಧ ಕುಲಸಚಿವರು ಮತ್ತು ಕುಲಸಚಿವ(ಪರೀಕ್ಷಾಂಗ) ಅವರನ್ನೊಳಗೊಂಡಂತೆ ಒಂದು ಸಮಿತಿ ರಚಿಸಿ ಸಮಿತಿಯು ಎಲ್ಲಾ ಸಾಧಕ-ಬಾದಕಗಳೊಂದಿಗೆ ಸಲ್ಲಿಸುವ ವರದಿಯ ಆಧಾರದ ಮೇಲೆ ನಿರ್ಧರಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2019/3.24** | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣ ಸಮಿತಿಯ ಶಿಫಾರಸುಗಳು |
| ತೀರ್ಮಾನ | ಮಾನ್ಯ ಕುಲಪತಿಯವರಿಂದ ಅನುಮೋದನೆಯೊಂದಿಗೆ ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣ ಸಮಿತಿಯ ಶಿಫಾರಸುಗಳನ್ನು ಜಾರಿಗೆ ತಂದಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2019/3.25** | **2019-20ನೇ ಸಾಲಿನಲ್ಲಿ ನಡೆಯಲಿರುವ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ರಚನೆ ಮಾಡಿರುವ ಪರೀಕ್ಷಾ ಮಂಡಳಿ ಬಗ್ಗೆ.** |
| ತೀರ್ಮಾನ | 2019-20ನೇ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳಿಗೆ ತುರ್ತಾಗಿ ಪ್ರಶ್ನೆ ಪತ್ರಿಕೆಗಳನ್ನು ಸಿದ್ದಪಡಿಸಲು ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ ಮಾನ್ಯ ಕುಲಪತಿಗಳ ಅನುಮೋದನೆ ಪಡೆದು BOAE ಶಿಫರಸ್ಸು ಮಾಡಿರುವ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಒಳಗೊಂಡ ಅಧಿಸೂಚನೆಗಳನ್ನು ಹೊರಡಿಸಲಾಗಿದ್ದರಿಂದ ಈ ವಿಷಯವನ್ನು ಸಿಂಡಿಕೇಟ್ ಸಭೆಯ ಗಮನಕ್ಕೆ ತಂದು ಅನುಮೋದನೆ ಪಡೆಯಲಾಯಿತು. |
| **2019/3.26** | **2018-19ನೇ ಸಾಲಿನ ಆಯವ್ಯಯ ಅಂದಾಜು ವೆಚ್ಚ ಶೀರ್ಷಿಕೆಗಳಲ್ಲಿ ಪುನರ್ ವಿನಿಯೋಗಗೊಳಿಸಿರುವ ಬಗ್ಗೆ.** |
| ತೀರ್ಮಾನ | 2018-19ನೇ ಸಾಲಿನ ಆಯವ್ಯಯ ಅಂದಾಜು ವೆಚ್ಚ ಶೀರ್ಷಿಕೆಗಳಲ್ಲಿ ಪುನರ್ ವಿನಿಯೋಗಿಸಿ ಮತ್ತು ಇತರೆ ವೆಚ್ಚ ಶೀರ್ಷಿಕೆಗಳಲ್ಲಿ ಮರು ಹೊಂದಾಣಿಕೆ ಮಾಡಿಕೊಂಡಿರುವುದನ್ನು ಹಣಕಾಸು ಸಮಿತಿಯು ಒಪ್ಪಿದ್ದು ಸಿಂಡಿಕೇಟ್ ಸಹ ಅನುಮೋದಿಸಿತು. |
| **2019/3.27** | **2019-20ನೇ ಸಾಲಿನ ಆಯವ್ಯಯ ಅಂದಾಜುಗಳು** |
| ತೀರ್ಮಾನ | 2019-20ನೇ ಸಾಲಿನ ಆಯವ್ಯಯ ಅಂದಾಜುಗಳಿಗೆ ಹಣಕಾಸು ಸಮಿತಿಯು ಅನುಮೋದಿಸಿರುವುದನ್ನು ಗಮನಿಸಿದ ಸಿಂಡಿಕೇಟ್ ವಿದ್ಯಾವಿಷಯಕ ಪರಿಷತ್ತಿನ ಅನುಮೋದನೆಯನ್ನು ಕಾಯ್ದಿರಿಸಿ 2019-20ನೇ ಸಾಲಿನ ಆಯವ್ಯಯ ಅಂದಾಜನ್ನು ಅನುಮೋದಿಸಿತಲ್ಲದೇ ವೇತನ/ಪಿಂಚಣಿ ಹಾಗೂ ಇತರೆ ಅಗತ್ಯ ವೆಚ್ಚಗಳನ್ನು ಭರಿಸಲು ಅನುಮತಿಸಿತು. |
| **2019/3.28** | **ವಿಶ್ವವಿದ್ಯಾನಿಲಯದಲ್ಲಿರುವ ವಿದ್ಯಾರ್ಥಿ ಕ್ಷೇಮನಿಧಿ ಖಾತೆಯನ್ನು ದಿನಾಂಕ: 31.03.2010ಕ್ಕೆ ಮುಕ್ತಾಯಗೊಳಿಸಿ ಜಿ.ಆರ್.ಎ., ಖಾತೆಯಲ್ಲಿರುವ ವಿದ್ಯಾರ್ಥಿ ಕ್ಷೇಮಪಾಲನಾ ಚಟುವಟಿಕೆಗಳಿಗೆ ಸೇರ್ಪಡಿಸುವುದರ ಬಗೆಗೆ.** |
| ತೀರ್ಮಾನ | ವಿಶ್ವವಿದ್ಯಾನಿಲಯದಲ್ಲಿರುವ ವಿದ್ಯಾರ್ಥಿ ಕ್ಷೇಮನಿಧಿ ಖಾತೆಯನ್ನು ದಿನಾಂಕ: 31.03.2010ಕ್ಕೆ ಮುಕ್ತಾಯಗೊಳಿಸಿ ಜಿ.ಆರ್.ಎ., ಖಾತೆಯಲ್ಲಿರುವ ವಿದ್ಯಾರ್ಥಿ ಕ್ಷೇಮಪಾಲನಾ ಚಟುವಟಿಕೆಗಳಿಗೆ ಶೀರ್ಷಿಕೆಗೆ ವಿಲೀನಗೊಳಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | |
|---|---|
| **2019/3.29** | **ಕರ್ನಾಟಕ ಸರ್ಕಾರವು 6ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಪಿಂಚಣಿ/ಕುಟುಂಬ ಪಿಂಚಣಿದಾರರುಗಳಿಗೆ ಅಳವಡಿಸಿಕೊಂಡಿರುವ ಬಗೆಗೆ.** |
| ತೀರ್ಮಾನ | ದಿನಾಂಕ: 11.01.2019ರ ಸರ್ಕಾರದ ಆದೇಶದಲ್ಲಿ 80 ವರ್ಷಗಳು ಮತ್ತು ಅದಕ್ಕೂ ಮೇಲ್ಪಟ್ಟ ಎಲ್ಲಾ ರಾಜ್ಯ ಸರ್ಕಾರಿ ಪಿಂಚಣಿದಾರರು/ಕುಟುಂಬ ಪಿಂಚಣಿದಾರರುಗಳಿಗೆ ದಿನಾಂಕ: 01.01.2019ರಿಂದ ಜಾರಿಗೆ ಬರುವಂತೆ ಪಿಂಚಣಿ ಹೆಚ್ಚಳವನ್ನು ಪಾವತಿಸಲು ಆದೇಶಿಸಿರುವುದನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **2019/3.30** | **2018–19ನೇ ಸಾಲಿನ ಆಯವ್ಯಯ ಅಂದಾಜಿನ(IIDF) ಮಾಹಿತಿ ಅನುದಾನವನ್ನು ರೂ.1.50 ಕೋಟಿಗಳಿಂದ ರೂ.3.40 ಕೋಟಿಗಳಿಗೆ ಪುನರ್ ವಿನಿಯೋಗ (Re-appropriation) ಮಾಡುವ ಬಗ್ಗೆ.** |
| ತೀರ್ಮಾನ | 2018–19ನೇ ಸಾಲಿನ ಮಾಹಿತಿ ಸೌಲಭ್ಯ ಅಭಿವೃದ್ಧಿ ನಿಧಿ–47ರ ವೆಚ್ಚ ಶೀರ್ಷಿಕೆ–Office Automation-185ಕ್ಕೆ ಪ್ರಸ್ತುತ ರೂ.1.50ಕೋಟಿ ನಿಗದಿಪಡಿಸಿದ್ದು ಪ್ರಸ್ತುತ ಈಗಾಗಲೇ ಹೆಚ್ಚುವರಿಯಾಗಿ (–) 98,52,322/- ಖರ್ಚಾಗಿದ್ದು, ಮಾರ್ಚ್–31 ಅಂತ್ಯದೊಳಗೆ ಅಯವ್ಯಯದ ನಿರೀಕ್ಷಿತ ವೆಚ್ಚಗಳನ್ನು ಸೇರಿಸಿ ಪ್ರಸ್ತುತ ಸದರಿ ಶೀರ್ಷಿಕೆಗೆ ರೂ.1.50 ಕೋಟಿ ರೂಪಾಯಿಗಳಿಂದ ರೂ.3.40 ಕೋಟಿಗಳಿಗೆ ಮರುಹೊಂದಾಣಿಕೆ (Re-appropriation) ಮಾಡಿಕೊಳ್ಳಲು ಸಿಂಡಿಕೇಟ್ ಅನುಮೋದಿಸಿತು. |
| **2019/3.31** | **2018–19ನೇ ಸಾಲಿನ IDF-189 ಇತರೆ ವೆಚ್ಚಗಳ ಶೀರ್ಷಿಕೆಯಲ್ಲಿ ರೂ.10.00ಲಕ್ಷದಿಂದ ರೂ.30.00 ಲಕ್ಷಗಳಿಗೆ ಮರುಹೊಂದಾಣಿಕ ಬಗ್ಗೆ.** |
| ತೀರ್ಮಾನ | 2018–19ನೇ ಸಾಲಿನ IDF-189 ಇತರೆ ವೆಚ್ಚಗಳ ಶೀರ್ಷಿಕೆಯಲ್ಲಿ ರೂ.1.00ಲಕ್ಷಗಳನ್ನು ನಿಗದಿಪಡಿಸಲಾಗಿದ್ದು ಈಗಾಗಲೇ ದಿನಾಂಕ: 11.01.2019ರಂದು ನಡೆದ ಹಣಕಾಸು ಸಮಿತಿಯಲ್ಲಿ ರೂ.1,00,000/–ದಿಂದ ರೂ.10,00,000/–ಗಳಿಗೆ ಮರುಹೊಂದಾಣಿಕೆ ಮಾಡಿಕೊಂಡು 40ನೇ Indian Social Science Congress ಕಾರ್ಯಕ್ರಮದ ಹೆಚ್ಚುವರಿ ವೆಚ್ಚವನ್ನು ಪಾವತಿಸಲಾಗಿರುವುದನ್ನು ಗಮನಿಸಿದ ಸಿಂಡಿಕೇಟ್ ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯಲ್ಲಿ ನಿರ್ಮಿಸಲಾಗಿರುವ ಕಟ್ಟಡಗಳ ಮುಂಭಾಗ ಮತ್ತು ಸ್ಕೂಲ್ ಆಫ್ ಲಾ, ಹೊಸ ಮ್ಯೂಸಿಯಂ ಮತ್ತು ಡೌನ್ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ಅಲಂಕಾರಿಕ ಗಿಡಗಳನ್ನು ದಿ ನರ್ಸರಿಮನ್ ಕೋ ಅಪರೇಟಿಸ್ ಸೋಸೈಟಿ ಲಾಲ್_ಬಾಗ್, ಬೆಂಗಳೂರು ಇವರಿಂದ ಉದ್ಯಾನವನ ನಿರ್ಮಿಸಲು ತಗಲುವ ವೆಚ್ಚವನ್ನು ಪಾವತಿಸಲು 2018–19ನೇ ಸಾಲಿನ IDF-189 ಇತರೆ ವೆಚ್ಚಗಳ ಶೀರ್ಷಿಕೆಯ ಮೊತ್ತ ರೂ.10,00,000/–ಗಳಿಂದ ರೂ. 30,00,000/–ಗಳಿಗೆ ಮರುಹೊಂದಾಣಿಕೆ ಮಾಡಿಕೊಳ್ಳಲು ಸಿಂಡಿಕೇಟ್ ಅನುಮೋದಿಸಿತು. |
| **2019/3.32** | **2015–2016ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಅನುಪಾಲನಾ ವರದಿ.** |
| ತೀರ್ಮಾನ | 2015–16ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಕಂಡಿಕೆವಾರು ಆಕ್ಷೇಪಣೆಗಳಿಗೆ ಸಂಬಂಧಪಟ್ಟ ವಿಭಾಗಗಳಿಂದ ಸಂಗ್ರಹಿಸಲಾಗಿರುವ ಉತ್ತರವನ್ನು ಕ್ರೋಢೀಕರಿಸಿ ದಿನಾಂಕ: 22.03.2019 ರಂದು ನಡೆದ ಹಣಕಾಸು ಸಮಿತಿ ಸಭೆಯು ಪರಿಶೀಲಿಸಿ ಅನುಮೋದಿಸಿರುವುದನ್ನು ಸಿಂಡಿಕೇಟ್ ಸಭೆಯು ಸಹ ಅನುಮೋದಿಸಿತು. |
| **2019/3.33** | **ದೊಂಡಿಬ ವಿಶ್ವನಾಥ್, ಸಂಶೋಧನಾ ಅಭ್ಯರ್ಥಿ, ಇವರು ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ.** |
| ತೀರ್ಮಾನ | ಡಾ. ದೇವರಾಜು, ಪ್ರಾಧ್ಯಾಪಕರು ಇವರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿರುವ ದೊಂಡಿಬ ವಿಶ್ವನಾಥ್, ಸಂಶೋಧನಾ ಅಭ್ಯರ್ಥಿ, ರಸಾಯನಶಾಸ್ತ್ರ ಅಧ್ಯಯನ ವಿಭಾಗ, |

| | |
|---|---|
| | ಯುವರಾಜ ಕಾಲೇಜು, ಮೈಸೂರು ಇವರು ಹೆಚ್ಚುವರಿಯಾಗಿ ಒಂದು ತಿಂಗಳು ಕಾಲಾವಕಾಶ ಕೋರಿರುವ ಮನವಿಯನ್ನು ಪರಿಶೀಲಿಸಿ ಸಿಂಡಿಕೇಟ್ ಸದರಿಯವರಿಗೆ ರೂ.25,000/-ಗಳ ದಂಡಶುಲ್ಕದೊಂದಿಗೆ ಸಂಶೋಧನೆಯನ್ನು ಅಂತಿಮಗೊಳಿಸಿ ಮಹಾಪ್ರಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕೆಂಬ ಷರತ್ತಿನೊಂದಿಗೆ ಒಂದು ತಿಂಗಳ ಕಾಲಾವಕಾಶವನ್ನು ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2019/3.34** | **ಸಹನ ಎಂ., ಸಂಶೋಧನಾ ಅಭ್ಯರ್ಥಿ, ಇವರು ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ.** |
| ತೀರ್ಮಾನ | ಡಾ.ಎಂ ಪುಷ್ಪಾವತಿ, ಪ್ರಾಧ್ಯಾಪಕರು ಇವರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹನ ಎಂ, ಸಂಶೋಧನಾ ಅಭ್ಯರ್ಥಿ, Depart of Speech and Hearing, AIISH, Manasagangotri, Mysore ಇವರು ಹೆಚ್ಚುವರಿಯಾಗಿ ಮೂರು ತಿಂಗಳು ಕಾಲಾವಕಾಶ ಕೋರಿರುವ ಅವರ ಮನವಿಯನ್ನು ಪರಿಶೀಲಿಸಿದ ಸಿಂಡಿಕೇಟ್ ಸದರಿಯವರಿಗೆ ರೂ.25,000/-ಗಳ ದಂಡಶುಲ್ಕದೊಂದಿಗೆ ಸಂಶೋಧನೆಯನ್ನು ಅಂತಿಮಗೊಳಿಸಿ ಮಹಾಪ್ರಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಬೇಕೆಂಬ ಷರತ್ತಿನೊಂದಿಗೆ ಮೂರು ತಿಂಗಳ ಕಾಲಾವಕಾಶವನ್ನು ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2019/3.35** | **ಡಾ. ಸಿ.ಎಸ್.ಆನಂದ್ ಕುಮಾರ್, ಸಹ ಪ್ರಾಧ್ಯಾಪಕರು, ನ್ಯಾನೋ ಟೆಕ್ನಾಲಜಿ ವಿಭಾಗ, ವಿಶ್ವೇಶ್ವರಯ್ಯ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಟೆಕ್ನಾಲಜಿ, ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ ಇವರನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮಾಡಿರುವ ನಿಯೋಜನೆಯನ್ನು ಮತ್ತೆ ಇನ್ನೂ ಒಂದು ವರ್ಷ ಅವಧಿಗೆ ಮುಂದುವರಿಸುವ ಬಗ್ಗೆ.** |
| ತೀರ್ಮಾನ | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ), ಬೆಂಗಳೂರು ಇವರು ಡಾ. ಸಿ.ಎಸ್.ಆನಂದ್ ಕುಮಾರ್‌ರವರ ಮೈಸೂರು ವಿಶ್ವವಿದ್ಯಾನಿಲಯದಲ್ಲಿನ ನಿಯೋಜನಾ ಅವಧಿಯನ್ನು ಮತ್ತೂ ಒಂದು ವರ್ಷದವರೆಗೆ (2019-20) ಮೆಟೀರಿಯಲ್ಸ್ ಸೈನ್ಸ್ ವಿಭಾಗದಲ್ಲಿ ಮುಂದುವರೆಸಲು ವಿಸ್ತರಿಸಿರುವುದನ್ನು ಸಿಂಡಿಕೇಟ್ ಅನುಮೋದಿಸಿತು. |

**ಇತರೆ ವಿಷಯಗಳು:**

- ಪ್ರೊ. ಮಹದೇವ್, ಪ್ರಾಧ್ಯಾಪಕರು ಇವರು ಮಾತನಾಡಿ ಸೆಂಟ್ ಫಿಲೋಮಿನಾಸ್ ಕಾಲೇಜಿನಲ್ಲಿ 13 ವಿದ್ಯಾರ್ಥಿಗಳನ್ನು ನಿಯಮ ಉಲ್ಲಂಘನೆ ಮಾಡಿ ಪ್ರವೇಶಾತಿ ನೀಡಿರುವುದನ್ನು ಹಿಂಪಡೆದು ಸಿಂಡಿಕೇಟ್ ಕ್ರಮ ಜರುಗಿಸಬೇಕು ಹಾಗೂ ಶಿಕ್ಷೆ ವಿಧಿಸಬೇಕು ಎಂಬುದಾಗಿ ಒತ್ತಾಯಿಸಿದರು.

  ಮಾನ್ಯ ಕುಲಪತಿಯವರು ಮಾತನಾಡಿ ಇನ್ನು ಮುಂದೆ ವಿಶ್ವವಿದ್ಯಾನಿಲಯಗಳ ನಿಯಮಾನುಸಾರವೇ ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ಎಲ್ಲಾ ಸಂಯೋಜಿತ ಕಾಲೇಜುಗಳು ಕೈಗೊಳ್ಳುವಂತೆ ಗಮನಹರಿಸಲಾಗುವುದೆಂದು ಮತ್ತು ಸೆಂಟ್ ಫಿಲೋಮಿನಾಸ್ ಕಾಲೇಜಿನ ವಿಷಯವಾಗಿ ಕುಲಸಚಿವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿ ಕೂಲಂಕಷವಾದ ಒಂದು ವರದಿಯನ್ನು ಪಡೆದು ನಂತರ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕೊನೆಯಲ್ಲಿ ಅಧ್ಯಕ್ಷರು ಹಾಗೂ ಮಾನ್ಯ ಕುಲಪತಿಗಳು ಸಭೆಯಲ್ಲಿ ಭಾಗವಹಿಸಿದಂತಹ ಸದಸ್ಯರುಗಳಿಗೆ ವಂದನೆಗಳನ್ನು ತಿಳಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

**ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ**

**ಕುಲಪತಿ ಮತ್ತು ಅಧ್ಯಕ್ಷರು**